ತಾವೇ ಸಿದ್ಧಪಡಿಸಬೇಕಾದುದು ಅತ್ಯಗತ್ಯ.

ದೇಶ ಮತ್ತು ಸಮಾಜದ ಭವಿಷ್ಯವು ನಮ್ಮ ಕೈಯಲ್ಲಿದೆ. ಸಮಾಜದಲ್ಲಿ ಒಳಿತನ್ನು ವ್ಯಾಪಕಗೊಳಿಸಲು ಮತ್ತು ಕೆಡುಕನ್ನು ನಿರ್ಮೂಲನಗೊಳಿಸಲು ನಾವು ಎಷ್ಟರ ಮಟ್ಟಿಗೆ ಪ್ರಯತ್ನಿಸುತ್ತೇವೋ ಅದರ ಭವಿಷ್ಯವೂ ಅಷ್ಟೇ ಉಜ್ವಲವಾಗಿರುವುದು. ಈ ಪ್ರಮುಖ ಹೊಣೆಗಾರಿಕೆಯು ಒಬ್ಬರದಲ್ಲ; ಅದು ಎಲ್ಲರ ಕರ್ತವ್ಯವಾಗಿದೆ. ನಾವು ನಮ್ಮ ಹೊಣೆಗಾರಿಕೆಗಳನ್ನು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ನಿರ್ವಹಿಸಲು ಪ್ರಯತ್ನಿಸಿದಾಗ ಮಾತ್ರ ಒಂದು ಉತ್ತಮ ಸಮಾಜದ ನಿರ್ಮಾಣವನ್ನು ಖಾತ್ರಿಪಡಿಸಬಹುದು.

ಈ ಎಲ್ಲ ಉದ್ದೇಶಗಳನ್ನು ಮುಂದಿಟ್ಟು ಗರ್ಲ್ಸ್ ಇಸ್ಲಾಮಿಕ್ ಆರ್ಗನೈಝೇಶನ್ (ಜಿ.ಐ.ಓ.) ಕರ್ನಾಟಕವು 'ಉತ್ತಮ ಸಮಾಜಕ್ಕಾಗಿ ಹೊಣೆಗಾರ ಯುವತಿಯರು' ಎಂಬ ಒಂದು ತ್ರಿದಿನ ಸಂದೇಶ ಪ್ರಚಾರ ಅಭಿಯಾನವನ್ನು ಹಮ್ಮಿಕೊಂಡಿದೆ. 2011ರ ಅಕ್ಟೋಬರ್ 28ರಿಂದ 30ರ ವರೆಗೆ ನಡೆಸಲಾಗುವ ಈ ಅಭಿಯಾನದ ವೇಳೆ, ವೈಯಕ್ತಿಕ ಮತ್ತು ಸಾಮೂಹಿಕ ಭೇಟಿ, ಸಂದೇಶ ಪ್ರಚಾರದ ಸಾಹಿತ್ಯ ವಿತರಣೆ, ಶಾಲೆ, ಕಾಲೇಜು ಮತ್ತು ಗರ್ಲ್ಸ್ ಹಾಸ್ಟೆಲ್‌ಗಳಲ್ಲಿ ಉಪನ್ಯಾಸ, ಸಾರ್ವಜನಿಕ ಭಾಷಣ, ವಿಚಾರಗೋಷ್ಠಿ, ನಾಟಕ, ವಸ್ತುಪ್ರದರ್ಶನ ಇತ್ಯಾದಿ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುವುದು. (ಇನ್‌ಶಾ ಅಲ್ಲಾಹ್)

ಬನ್ನಿ, ಈ ಮಹಾನ್ ಉದ್ದೇಶಕ್ಕಾಗಿ ಸಹಕರಿಸಿ. ನಾವೆಲ್ಲ ಒಟ್ಟು ಸೇರಿ ಒಂದು ಉತ್ತಮ ಸಮಾಜವನ್ನು ನಿರ್ಮಿಸೋಣ.

ಉತ್ತಮ ಸಮಾಜಕ್ಕೆ ಹೊಣೆಗಾರ ಯುವತಿಯರು

ಅಭಿಯಾನದ ಧ್ಯೇಯೋದ್ದೇಶಗಳು

- ಸಾಮಾಜಿಕ ಕೆಡುಕುಗಳ ದುಷ್ಪ್ರಭಾವಗಳನ್ನು ಎತ್ತಿ ತೋರಿಸುವುದು.
- ಉತ್ತಮ ಸಮಾಜ ನಿರ್ಮಾಣದ ಮಹತ್ವವನ್ನು ಪ್ರಸ್ತುತಪಡಿಸುವುದು.
- ಸಮಾಜದಲ್ಲಿ ಉನ್ನತ ಮೌಲ್ಯಗಳ ಸ್ಥಾಪನೆಗಾಗಿ ಪ್ರಯತ್ನಿಸುವುದು.
- 'ಉತ್ತಮ ಸಮಾಜಕ್ಕೆ ಹೊಣೆಗಾರ ಯುವತಿಯರ' ಮಹತ್ವ ಮತ್ತು ಅಗತ್ಯವನ್ನು ಪ್ರಸ್ತುತಪಡಿಸುವುದು.

Girls Islamic Organisation

D.No. 2444, M.C.C. 'A' Block,
11th Main, 11th Cross,
Near Buckeshwar High School,
Davangere - 577004
giokarnataka@gmal.com

ಉತ್ತಮ ಸಮಾಜಕ್ಕೆ ಹೊಣೆಗಾರ ಯುವತಿಯರು

3 - Day Dawah Campaign
28 - 30 October, 2011

ಪ್ರತಿಯೊಂದು ಸಮಾಜವೂ ಒಳಿತು ಅಥವಾ ಕೆಡುಕಿನ ಪ್ರಭಾವಕ್ಕೆ ಒಳಗಾಗುತ್ತಿರುತ್ತದೆ. ಯುವ ಜನತೆಯೇ ಇದಕ್ಕೆ ಹೆಚ್ಚು ಬಲಿಯಾಗುತ್ತದೆ. ಸಮಾಜದಲ್ಲಿ ಒಳಿತುಗಳೇ ಇದ್ದರೆ ಯುವತಿಯರು ಒಳಿತನ್ನು ತನ್ನದಾಗಿಸಲು ಮುಂದಾಗುತ್ತದೆ. ಪರಿಸ್ಥಿತಿಯು ಇದಕ್ಕೆ ವ್ಯತಿರಿಕ್ತವಾದರೆ ಯುವತಿಯರನ್ನು ಕೆಡುಕಿನಿಂದ ರಕ್ಷಿಸಲು ಸಾಧ್ಯವಿಲ್ಲ. ಇಂದಿನ ಯುವತಿಯರು ಇದೇ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅವರಿಗೆ ಒಳಿತಿಗಿಂತ ಕೆಡುಕುಗಳೇ ಹೆಚ್ಚು ಎದುರಾಗುತ್ತವೆ. ಆದ್ದರಿಂದ ಕೆಡುಕಿನ ಪ್ರಭಾವವನ್ನು ಅವರಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಯುವತಿಯರಿಗೆ ಒಳಿತು ಮತ್ತು ಕೆಡುಕಿನ ಪ್ರಭಾವದ ಕುರಿತು ತಿಳುವಳಿಕೆ ನೀಡಿದರೆ ಹಾಗೂ ಒಳಿತನ್ನು ಸ್ವೀಕರಿಸುವ ವಾತಾವರಣವನ್ನು ಒದಗಿಸಿದರೆ ಸಮಾಜದ ಸ್ವರೂಪವೇ ಬದಲಾಗಬಹುದು. ಒಮ್ಮೆ ಅವರಿಗೆ ಅದು ಮನವರಿಕೆಯಾದರೆ ಅನಂತರ ಒಂದು ಉತ್ತಮ ಸಮಾಜದ ನಿರ್ಮಾಣವನ್ನು ಖಾತ್ರಿಪಡಿಸಬಹುದು.

ಒಂದು ಉತ್ತಮ ಮತ್ತು ಆದರ್ಶ ಸಮಾಜದ ನಿರ್ಮಾಣಕ್ಕಾಗಿ ಸುಸಂಸ್ಕೃತ ಯುವಜನಾಂಗವನ್ನು ಸಿದ್ಧಪಡಿಸಬೇಕಾದ ಅಗತ್ಯವಿದೆ. ಈ ಪ್ರಧಾನ ಉದ್ದೇಶ ಸಾಧನೆಗಾಗಿ ಯುವಜನತೆಗೆ ತಮ್ಮ ಶಕ್ತಿಯ ಸಂಪೂರ್ಣ ತಿಳುವಳಿಕೆ ಇರಬೇಕಾದುದು ಮಾತ್ರವಲ್ಲ, ತಮ್ಮ ಕುಂದು ಕೊರತೆ ಮತ್ತು ದೌರ್ಬಲ್ಯಗಳ ಮೇಲೂ ದೃಷ್ಟಿಯಿರಬೇಕಾದ ಅಗತ್ಯವಿದೆ. ಅನ್ಯಥಾ ಅವರು ಒಳಿತು-ಕೆಡುಕುಗಳನ್ನು ಪರಿಗಣಿಸದೆ ಎಲ್ಲ ಅನುಕೂಲ-ಪ್ರತಿಕೂಲವಾದ ಎಲ್ಲ ಬದಲಾವಣೆಗಳಲ್ಲೂ ಪಾತ್ರ ವಹಿಸುವರು. ಅವರ ಸಮಾಜದಲ್ಲಿ ಅನುಕೂಲಕರ ಬದಲಾವಣೆಯಲ್ಲಿ ಪಾತ್ರ ವಹಿಸುವಂತೆ ಪ್ರಯತ್ನಿಸುವುದು ಯುವಜನರ ಹೊಣೆಗಾರಿಕೆಯಾಗಿದೆ. ಈ ಉದ್ದೇಶಕ್ಕಾಗಿ ಸಮಾಜದ ಮೇಲೆ ಹದ್ದು ಗಣ್ಣಿಡಬೇಕಾದುದು, ಕುಂದುಕೊರತೆಗಳನ್ನೂ ದೌರ್ಬಲ್ಯಗಳನ್ನೂ ಅರಿತಿರಬೇಕಾದುದು ಹಾಗೂ ಸಮಾಜ ನಿರ್ಮಾಣದಲ್ಲಿ ಉತ್ತಮ ಪಾತ್ರ ವಹಿಸುವುದಕ್ಕಾಗಿ ತಮ್ಮನ್ನು